<u>ಸಾಕ್ಷಿಯನ್ನು ದಿನಾಂಕ **16-01-2023** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಬಿ ವಿ ಎಂ ವಕೀಲರಿಂದ ಅರ್ಜಿದಾರ ಪರವಾಗಿ</u> ಃ(ಸಾಕ್ಷಿಯು ಸಾಕ್ಷಿಯ ಕಟಕಟೆಯಲ್ಲಿ ಹಾಜರಾಗಿ ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿ ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಸತ್ಯಾಪನೆ ಮಾಡಿರುತ್ತಾರೆ)

ಟಿ ನಾಗೇಶ್ವರ್ ರಾವ್ ಇವರ ಹೆಸರಿನಲ್ಲಿ ಖರೀದಿ ಕರಾರು ಪತ್ರ ಆಗಿರುವ ಮತ್ತು ಖರೀದಿ ಕರಾರು ರದ್ದು ಆಗಿರುವ ನೊಂದಾಯಿತ ಪತ್ರಗಳ ದೃಡೀಕೃತ ಪ್ರತಿಗಳನ್ನು ನಿಪಿ-27 ಮತ್ತು 28 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲು ಡಿ ಹೆಚ್ ಆರ್ ಪರ ಶ್ರೀ ಡಿ ಎ ಹೆಚ್ ವಕೀಲರಿಂದಃ</u>

ಟಿ ನಾಗೇಶ್ವರ್ ರಾವ್ ಇವರ ಜೊತೆ ಕ್ರಯಪತ್ರ ಯಾವಾಗ ಆಗಿದೆ ಎನ್ನುವುದು ಗೊತ್ತಿಲ್ಲ. ಎಷ್ಟು ಮೊತ್ತಕ್ಕೆ ಮತ್ತು ಯಾರ ಸಮಕ್ಷಮ ಖರೀದಿ ಆಯಿತು ಎನ್ನುವುದು ಗೊತ್ತಿಲ್ಲ ಮತ್ತು ನಮಗೆ ಯಾರೂ ಹೇಳಿಲ್ಲ. ಸನ್ 2017 ರಲ್ಲಿ ಟಿ ನಾಗೇಶ್ವರ್ ರಾವ್ ಮಾಡಿಕೊಂಡ ಕರಾರುಪತ್ರದ ಬಗ್ಗೆ ಗೊತ್ತಾಯಿತು. ಟಿ ನಾಗೇಶ್ವರ್ ರಾವ್ ಇವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಟಿ ನಾಗೇಶ್ವರ್ ರಾವ್ ಇವರು ನಂತರದಲ್ಲಿ ಕರಾರುಪತ್ರವನ್ನು ಡಿಕ್ರಿದಾರಕನಿಗೆ ಬರೆದುಕೊಟ್ಟಿದ್ದಾರೆ. ಟಿ ನಾಗೇಶ್ವರ್ ರಾವ್ ಇವರು ಡಿಕ್ರಿದಾರಕನಿಗೆ ಯಾವಾಗ ಕರಾರುಪತ್ರ ಬರೆದುಕೊಟ್ಟಿದ್ದಾರೆ ಎನ್ನುವುದು ಗೊತ್ತಿಲ್ಲ. ಟಿ ನಾಗೇಶ್ವರ್ ರಾವ್ ಇವರು ರಂಗಪ್ಪನಿಗೆ ಬರೆದುಕೊಟ್ಟ ಕರಾರುಪತ್ರದ ಬಗ್ಗೆ ಗೊತ್ತಿದ್ದು, ಅದನ್ನು ಹೊರತುಪಡಿಸಿ ಬೇರೆ ಗೊತ್ತಿಲ್ಲ. ನಿಪಿ-28 ರಂತೆ ಕರಾರುಪತ್ರ ರದ್ದಾಗಿರುವ ವಿಚಾರ ಗೊತ್ತಾಯಿತು. ಯಾವ ಕಾರಣಕ್ಕಾಗಿ ರದ್ದಾಗಿದೆ ಎನ್ನುವುದನ್ನು ನನಗೆ ಯಾರೂ ಹೇಳಿಲ್ಲ. ದಶರಥ ರಾಮಯ್ಯ ಮತ್ತು ಟಿ ನಾಗೇಶ್ವರ್ ರಾವ್ ಮಧ್ಯೆ ಆಗಿರುವ ವ್ಯವಹಾರ ಮತ್ತು ಡಿಕ್ರಿದಾರಕ ಮತ್ತು ದಶರಥ ರಾಮಯ್ಯ ಜೆಡಿಆರ್

ಮಧ್ಯೆ ಆಗಿರುವ ವ್ಯವಹಾರಕ್ಕೂ ಸಂಬಂಧ ಇದೆಯಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಭೂಮಿ ನಮ್ಮದು ಮತ್ತು ನನ್ನ ಗಂಡನದ್ದು ಅಂತ ತೋರಿಸುವ ಸಲುವಾಗಿ ನಿಪಿ-27 ಮತ್ತು 28 ಅನ್ನು ಹಾಜರುಪಡಿಸಿದ್ದೇನೆ. ಈ ಪ್ರಕರಣವನ್ನು ಮುಂದೂಡಿಸುವ ಸಲುವಾಗಿ ಈ ರೀತಿ ಅರ್ಜಿಗಳನ್ನು ಸಲ್ಲಿಸುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.